ಓ ಎಸ್ ನಂ. 242/2022
ಡಿ ಡಬ್ಲ್ಯು 2
ದಿನಾಂಕ 11/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಕೆ ವಿ ಎಂ ವಕೀಲರಿಂದಃ</u>

ನಾನು ಮತ್ತು ತಿಪ್ಪೇಸ್ವಾಮಿ ಅಣ್ಣತಮ್ಮಂದಿರು ಎಂದರೆ ಸರಿ. ದಾವಾ ಐಟಂ ನಂ.1 ಮತ್ತು 3 ರ ಆಸ್ತಿಗಳನ್ನು ಖರೀದಿಸುವ ಮೊದಲು ದಾಖಲೆಗಳನ್ನು ಮತ್ತು ಜಮೀನಿನ ಪೂರ್ವಪರಗಳನ್ನು ಪರಿಶೀಲಿಸಿರುತ್ತೇನಾ ಎಂದರೆ ಸಾಕ್ಷಿ ಸದರಿ ಸ್ವತ್ತು ಗೋವಿಂದಪ್ಪರವರ ಸ್ವಂತ ಆಸ್ತಿಗಳಾಗಿದ್ದು ಅದರಂತೆ ನಾನು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಮತ್ತು 3 ರ ಆಸ್ತಿಗಳು ವಾದಿಯ ತಂದೆ ವೀರಭದ್ರಪ್ಪ ಮತ್ತು ಗೋವಿಂದಪ್ಪರವರ ಜಂಟಿ ಖಾತೆಯಲ್ಲಿದ್ದವು ಎಂದರೆ ಸರಿಯಲ್ಲ. ನಾನು ಕ್ರಯಪತ್ರ ಮಾಡಿಕೊಂಡ ನಂತರದಲ್ಲಿ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡದಂತೆ ವೀರಭದ್ರಪ್ಪರವರು ಒಂದು ತಕರಾರು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ತಹಸೀಲ್ದಾರ್ ಕಚೇರಿಯಲ್ಲಿ ಆರ್ ಆರ್ ಟಿ ನಂ.48/2001-02 ರಂತೆ ಪ್ರಕರಣ ನಡೆದು ತಕರಾರು ಇರುವ ಕಾರಣ ಖಾತೆ ಮಾಡಲು ಬರುವುದಿಲ್ಲ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ದಾವಾ ಐಟಂ ನಂ.1

ಮತ್ತು 3ರ ಆಸ್ತಿಗಳು ಈಗಲೂ ಸಹ ವೀರಭದ್ರಪ್ಪ ಮತ್ತು ಗೋವಿಂದಪ್ಪರವರ ಜಂಟಿ ಖಾತೆಯಲ್ಲಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವೀರಭದ್ರಪ್ಪ ಮತ್ತು ಗೋವಿಂದಪ್ಪರವರ ಕುಟುಂಬದಲ್ಲಿ ಯಾರು ಯಾರು ಎಷ್ಟು ಜನ ಸದಸ್ಯರ ಇದ್ದಾರೆಂದು ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ನನಗೆ ಗೋವಿಂದಪ್ಪರವರು ಆಸ್ತಿಗಳನ್ನು ಮಾರಾಟ ಮಾಡಿದ್ದು ಅವರ ಅಣ್ಣ ವೀರಭದ್ರಪ್ಪರವರು ಇರುವ ವಿಚಾರ ಮಾತ್ರ ನನಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಕ್ರಯಪತ್ರಕ್ಕೆ ವೀರಭದ್ರಪ್ಪರವರು ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಹೌದು ಆದರೆ ಸದರಿ ಸ್ವತ್ತುಗಳು ಗೋವಿಂದಪ್ಪರವರ ಸ್ವಂತ ಆಸ್ತಿಗಳು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಮತ್ತು 3ರ ಆಸ್ತಿಗಳು ಮರುಳಪ್ಪರವರ ಮಕ್ಕಳಾದ ವಾದಿ ಶಿವಸ್ವಾಮಿ ಮತ್ತು ಅವರ ಕುಟುಂಬದವರಿಗೆಲ್ಲಾರಿಗೂ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ಸದರಿ ಸ್ವತ್ತುಗಳು ಗೋವಿಂದಪ್ಪರವರಿಗೆ ಮಾತ್ರ ಸೇರಿದ್ದು ಎಂದು ನುಡಿಯುತ್ತಾರೆ. ಕ್ರಯಪತ್ರಕ್ಕೆ ಗೋವಿಂದಪ್ಪರವರ ಸಹೋದರಿಯರ ಸಹಿ ಪಡೆದಿದ್ದೇನಾ ಎಂದರೆ ಸಾಕ್ಷಿ ಅವರು ಯಾರು ಇದ್ದಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ಮತ್ತು 3ರ ಆಸ್ತಿಗಳು ಗೋವಿಂದಪ್ಪರವರಿಗೆ ಮಾತ್ರ ಸೇರಿದ್ದಲ್ಲ ಅದರಲ್ಲಿ ವೀರಭದ್ರಪ್ಪ ಮತ್ತು ಅವರ ಕುಟುಂಬದವರಿಗೂ ಸಹ

ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಇಂದಿಗೂ ಸಹ ದಾವಾ ಐಟಂ ನಂ.1 ಮತ್ತು 3ರ ಆಸ್ತಿಗಳ ಖಾತೆ ವೀರಭದ್ರಪ್ಪ ಮತ್ತು ಗೋವಿಂದಪ್ಪರವರ ಜಂಟಿ ಖಾತೆಯಲ್ಲಿದ್ದರೂ ಸಹ ವೀರಭದ್ರಪ್ಪರವರಿಗೆ ಮೋಸ ಮಾಡಲು ನಾನು ಮತ್ತು ತಿಪ್ಪೇಸ್ವಾಮಿರವರು ದಾವಾ ಐಟಂ ನಂ.1 ಮತ್ತು 3ರ ಆಸ್ತಿಗಳನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.